ಆ) ಕೆಲವು ಅಲ್ಪಾವಧಿ ಹಾಗೂ ದೀರ್ಘಾವಧಿ ಯೋಜನೆಗಳನ್ನು ಒಳಗೊಂಡ ನೇಕಾರರ ಪ್ಯಾಕೇಜ್ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಇ) ನೇಕಾರರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹಾಗೂ ಅವರ ತಾಂತ್ರಿಕ ಹಾಗೂ ಕುಶಲತೆಯನ್ನು ಮೇಲ್ದರ್ಜೆಗೇರಿಸಿ ನಿರಂತರವಾಗಿ ಅವರ ಆರ್ಥಿಕ ಉತ್ಪನ್ನವನ್ನು ಹೆಚ್ಚಿಸಿದ್ದು ಅವುಗಳನ್ನು 2 ರಿಂದ 5 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು.

ಈ) ಇದರಿಂದಾಗಿ ಆ ಎರಡೂ ವರ್ಗಗಳ ನೇಕಾರರಿಗೆ ಅನುಕೂಲವಾಗುವುದು

ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ನಿಯಮ ಮೀರಿ ಹಣ ತೆಗೆದುಕೊಳ್ಳುತ್ತಿರುವುದು

250 (247): ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶು ಆಸ್ಪತ್ರೆಗಳಲ್ಲಿ ಇತ್ತೀಚಿಗೆ ರಾಸುಗಳಿಗೆ ಹಣ ವಸೂಲಿ ಮಾಡುತ್ತಿರುವುದು ನಿಜವೇ;

ಆ) ಮೂಕ ಪ್ರಾಣಿಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾದ ಸೌಲಭ್ಯ ಸಿಗದೇ ವಾಪಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರೈತರಿಗೆ ಆಸ್ಪತ್ರೆಗಳಲ್ಲಿ ಔಷಧ ಕೊಡದೇ ಅಂಗಡಿಗಳಲ್ಲಿ ಕೊಳ್ಳಲು ಆದೇಶ ಮಾಡಲಾಗುತ್ತದೆಯೇ;

ಈ) ಹಾಗಿದ್ದಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಎಷ್ಟೆಷ್ಟು ಔಷಧ ಒದಗಿಸಲಾಗುತ್ತಿವೆ; ವಿವರ ನೀಡುವುದು?

ಶ್ರೀ ಎಂ. ಮಹಾದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಸರ್ಕಾರಿ ಆದೇಶ ಸಂ:ಪಸಂಮೀ/57/ ಪಪಾಯೋ/2003, ಬೆಂಗಳೂರು, ದಿನಂಕ:21-7-2003ರಂತೆ ಹಿಂದೆ ವಿಧಿಸಿದ ಸೇವಾ ಶುಲ್ಕವನ್ನು ಸದ್ಯಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ.

ಆ) ಬಂದಿಲ್ಲ.

ಇ) ಇಲ್ಲ.

ಈ) ಜಾನುವಾರು ಸಂಖ್ಯೆಗೆ ಅನುಗುಣವಾಗಿ ಹಾಗೂ ವಂಟನ ಲಭ್ಯತೆ ಅನುಸಾರ ಜಿಲ್ಲಾವಾರು ಔಷಧಿಯನ್ನು ಸರಬರಾಜು ಮಾಡಲಾಗುತ್ತಿದ್ದು ಎಲ್ಲಾ ಉಪನಿರ್ದೇಶಕರು ಆಯಾ ಜಿಲ್ಲೆಯ ಅಧೀನ ಸಂಸ್ಥೆಗಳಿಗೆ ಮಾರ್ಗಸೂಚಿಯಂತೆ ಔಷಧಿಗಳನ್ನು ಮರುವಿತರಣೆ ಮಾಡುತ್ತಿದ್ದಾರೆ.

ಕೊಳ್ಳೇಗಾಲ ತಾಲ್ಲೂಕು ಕುಂತೂರಿನಲ್ಲಿರುವ ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ

251 (7): ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು ಕುಂತೂರಿನಲ್ಲಿರುವ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಯಾರ ಒಡೆತನದಲ್ಲಿದೆ; ಇದು ಮುಚ್ಚಿ ಎಷ್ಟು ತಿಂಗಳಾಗಿದೆ;

ಆ) ಈ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುತ್ತಿರುವ ರೈತರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ?